ಆ) ಬಸವನ ಬಾಗೇವಾಡಿ ಕ್ಷೇತ್ರದ ಪುನರ್ವಸತಿ ಕೇಂದ್ರಗಳಿಂದ ಹೊಲಗಳಿಗೆ/ ಮುಳುಗಡೆಯಾದ ಜಮೀನುಗಳಿಗೆ ಹೋಗಲು ರಸ್ತೆ ನಿರ್ಮಾಣದ ಬಗ್ಗೆ ಕೈಗೊಂಡಿರುವ ಕ್ರಮವು ಕೆಳಕಂಡಂತಿದೆ.

1) ಕೋಲಾರ–ಬಳೂತಿ ಮತ್ತು ಸಿದ್ಧನಾಥ–ಹಳೆರೊಳ್ಳಿ ಪುನರ್ವಸತಿ ಕೇಂದ್ರಗಳಲ್ಲಿ 7 ರಸ್ತೆಗಳನ್ನು ರೂ.37.50 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗಿದೆ.

2) ಹೊಸ ರಸ್ತೆಗಳ ನಿರ್ಮಾಣ ಪ್ರಸ್ತಾವನೆ ಪರಿಶೀಲನೆಯಲ್ಲಿರುವುದು.

ಅ) ಕೋಲಾರ ಪುನರ್ವಸತಿ ಕೇಂದ್ರ– 3 ರಸ್ತೆಗಳು (2.2 ಕಿ.ಮೀ. ಉದ್ದ) ರೂ.50 ಲಕ್ಷ

ಆ) ಸಿದ್ಧನಾಥ–ಹಳೆರೊಳ್ಳಿ ಪುನರ್ವಸತಿ ಕೇಂದ್ರ–2 ರಸ್ತೆಗಳು (6 ಕಿ.ಮೀ.ಉದ್ದ) ರೂ.35 ಲಕ್ಷ

ಇ) ಬಳೂತಿ ಪುನರ್ವಸತಿ ಕೇಂದ್ರ –2 ರಸ್ತೆಗಳು (3 ಕಿ.ಮೀ.ಉದ್ದ) ರೂ.16 ಲಕ್ಷ

– ಇವುಗಳಿಗೆ ಅಗತ್ಯವಾದ ಜಮೀನನ್ನು ಸ್ವಾಧೀನಪಡಿಸಿಕೊಂಡು ರಸ್ತೆ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು.

719 ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆ, ಬಸವನಬಾಗೇವಾಡಿ ಮತ ಕ್ಷೇತ್ರದ ಹಳೆರೊಳ್ಳಿ ತಾಂಡಾ–2 ಮುಳುಗಡೆ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತಿದ್ದು, ಸದರಿ ಗ್ರಾಮವು ನೀರಿನ ತೇವಾಂಶ (ಜವಳ)ದಿಂದ ಕೂಡಿರುವುದರಿಂದ ರೋಗ ರುಜಿನಗಳು ಹರಡುವ ಸಾಧ್ಯತೆ ಹೆಚ್ಚಾಗಿರುವುದರಿಂದ ಸದರಿ ಗ್ರಾಮವನ್ನು ಬೇರೆಡೆಗೆ ಸ್ಥಳಾಂತರಿಸುವ ಸಲುವಾಗಿ, ಭೂಸ್ವಾಧೀನಪಡಿಸಿ–ಕೊಳ್ಳುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸರ್ಕಾರದ ಗಮನಕ್ಕೆ ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಬಂದಿದೆ.

ಆ) ಮುಳುಗಡೆ ವ್ಯಾಪ್ತಿಯೊಳಗೆ ಬರುವ ಹಳೆರೊಳ್ಳಿ ತಾಂಡಾ–2 ಕ್ಕೆ ಸಂಬಂಧಪಟ್ಟಂತೆ ರಿ.ಸಂ.ನಂ–135 ಹಾಗೂ 142 ರ ಜಮೀನಿನಲ್ಲಿರುವ 36

ಕುಟುಂಬಗಳ ಪೈಕಿ ಈಗಾಗಲೇ 24 ಕುಟುಂಬಗಳಿಗೆ ಹಳೆರೊಳ್ಳಿ ತಾಂಡಾ ಪುನರ್ವಸತಿ ಕೇಂದ್ರದಲ್ಲಿ ನಿವೇಶನಗಳ ಹಕ್ಕುಪತ್ರಗಳನ್ನು ನೀಡಲಾಗಿದೆ. ಬಾಕಿ ಉಳಿದ 12 ಸಂತ್ರಸ್ಥರು ಹಕ್ಕುಪತ್ರ ಪಡೆದಿರುವುದಿಲ್ಲ.

444 ಡಾ॥ ಶರಣಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಇರುವ ನೀರಾವರಿ ಯೋಜನೆಗಳಿಗೆ (ಬೆಣ್ಣೆತೋರಾ, ಎಲ್.ಎಂ.ಪಿ. ಅಮರ್ಜಾ ಮತ್ತು ಗಂಡೋರಿ ನಾಲಾ) ಯೋಜನೆವಾರು ಆಗಿರುವ ವೆಚ್ಚವೆಷ್ಟು;

ಆ) ಸದರಿ ನೀರಾವರಿ ಯೋಜನೆಗಳಿಂದ ಎಷ್ಟು ಎಕರೆ ಭೂಮಿಗೆ ನೀರು ಒದಗಿಸಲಾಗಿದೆ; (ಪ್ರತ್ಯೇಕ ವಿವರಣೆ ನೀಡುವುದು);

ಇ) ಸದರಿ ಇರುವ ಯೋಜನೆಗಳಿಗೆ ಇನ್ನು ಎಷ್ಟು ಹಣದ ಅವಶ್ಯಕತೆಯಿದೆ ಹಾಗೂ ಯಾವಾಗ ಈ ನೀರಾವರಿ ಯೋಜನೆಗಳನ್ನು ಪೂರ್ತಿಗೊಳಿಸಿ ರೈತರ ಜಮೀನುಗಳಿಗೆ ನೀರು ಕೊಡಲಾಗುವುದು?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಇರುವ ನೀರಾವರಿ ಯೋಜನೆಗಳಾದ ಬೆಣ್ಣೆತೋರಾ, ಕೆಳದಂಡೆ ಮುಲ್ಲಾಮಾರಿ, ಅಮರ್ಜಾ ಮತ್ತು ಗಂಡೋರಿನಾಲಾ ಯೋಜನೆಗಳಿಗೆ ಆಗಿರುವ ವೆಚ್ಚದ ವಿವರಗಳು ಈ ಕೆಳಗಿನಂತಿದೆ:–

(ರೂ.ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ಯೋಜನೆಗಳು	ಪ್ರಾರಂಭದಿಂದ ಮೇ 2009ರ ವರೆಗೆ ಆಗಿರುವ ವೆಚ್ಚ
1	ಬೆಣ್ಣೆತೋರಾ	330.29
2	ಕೆಳದಂಡೆ ಮುಲ್ಲಾಮಾರಿ	171.93
3	ಅಮರ್ಜಾ	156.52
4	ಗಂಡೋರಿನಾಲಾ	210.89